# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಎಮ್‌ವೈಎಸ್/2756/2017/ಪಿಪಿ

ಬಹುಮಹಡಿಗಳ ಕಟ್ಟಡ,
ಡಾ: ಬಿ.ಆರ್. ಅಂಬೇಡ್ಕರ್ ವೀಧಿ,
ಬೆಂಗಳೂರು,

ದಿನಾಂಕ: 16/12/2020.

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(3) ರನ್ವಯ ವರದಿ

ವಿಷಯ: ಶ್ರೀ ಮರಿಸ್ವಾಮಿ, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ಪಾಳ್ಯ ಗ್ರಾಮ ಪಂಚಾಯತ್, ಕೊಳ್ಳೇಗಾಲ ತಾಲ್ಲೂಕು, ಚಾಮರಾಜನಗರ ಜಿಲ್ಲೆ ಇವರು ಸರ್ಕಾರಿ/ಸಾರ್ವಜನಿಕ ನೌಕರರಾಗಿ ದುರ್ನಡತೆ ಎಸಗಿರುವ ಕುರಿತು ವರದಿ.

*****

1. ದೂರುದಾರರಾದ ಶ್ರೀ ರಂಗಸ್ವಾಮಿ ಬಿನ್ ಲೇಟ್ ಪುಟ್ಟರಂಗಯ್ಯ, ಪಾಳ್ಯ ಗ್ರಾಮ ಮತ್ತು ಅಂಚೆ, ಕೊಳ್ಳೇಗಾಲ ತಾಲ್ಲೂಕು, ಚಾಮರಾಜನಗರ ಜಿಲ್ಲೆ (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ಇವರು ಶ್ರೀ ಮರಿಸ್ವಾಮಿ, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ಪಾಳ್ಯ ಗ್ರಾಮ ಪಂಚಾಯತ್, ಕೊಳ್ಳೇಗಾಲ ತಾಲ್ಲೂಕು, ಚಾಮರಾಜನಗರ ಜಿಲ್ಲೆ (ಇನ್ನು ಮುಂದೆ 'ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ದೂರನ್ನು ಸಲ್ಲಿಸಿರುತ್ತಾರೆ.

2.ದೂರಿನ ಸಂಕ್ಷಿಪ್ತ ಸಾರಾಂಶ:-

ಪಾಳ್ಯ ಗ್ರಾಮ ಪಂಚಾಯತಿಯ ಸ್ವತ್ತಿನ ಸಂಖ್ಯೆ: 693ರಲ್ಲಿ ಅಂಗಡಿ ನಡೆಸಲು ಮಾದಮ್ಮ ಎನ್ನುವವರಿಗೆ ಪಂಚಾಯತಿ ವತಿಯಿಂದ ದಿನಾಂಕ: 23/05/2017 ರಂದು ಜನರಲ್ ಲೈಸನ್ಸ್ ನೀಡಿರುತ್ತಾರೆ. ಅಂಗಡಿ ಮಳಿಗೆಗೆ

ವಿದ್ಯುತ್ ಸಂಪರ್ಕ ಕೊಡಬಹುದೆಂದು ದಿನಾಂಕ: 28/04/2017 ರಂದು ಪಂಚಾಯತಿಯವರು ದೃಢೀಕರಣ ಪತ್ರ ನೀಡಿರುತ್ತಾರೆ. ದಿನಾಂಕ: 05/06/2017 ರಂದು ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತದವರು ಆರ್.ಆರ್. ಸಂಖ್ಯೆಗಳನ್ನು ನೀಡಿ ವಿದ್ಯುತ್ ಸಂಪರ್ಕ ನೀಡಿರುತ್ತಾರೆ. ಪಂಚಾಯತಿಯವರು ಸದರಿ ನಿವೇಶನಗಳನ್ನು ವಾಸೋಪಯೋಗಕ್ಕಾಗಿ ಮಂಜೂರು ಮಾಡಿರುತ್ತಾರೆ ಆದರೆ ನಿವೇಶನದಲ್ಲಿ ವಾಣಿಜ್ಯ ಮಳಿಗೆಗಳನ್ನು ಕಟ್ಟಿರುವುದು ನಿಯಮಗಳ ಉಲ್ಲಂಘನೆಯಾಗಿರುತ್ತದೆ ಎಂದು ಪಿರ್ಯಾದುದಾರರು ದೂರು ಸಲ್ಲಿಸಿ ವಿದ್ಯುತ್ ಸಂಪರ್ಕ ರದ್ದುಗೊಳಿಸಲು ಕೋರಿರುತ್ತಾರೆ. ವಿದ್ಯುತ್ ನಿಗಮದ ಸಹಾಯಕ ಕಾರ್ಯಪಾಲಕ ಅಭಿಯಂತರರು ದಿನಾಂಕ: 16/08/2017 ರಂದು ಪಂಚಾಯತಿಗೆ ಪತ್ರ ಬರೆದು ತಾವು ನೀಡಿದ ಜನರಲ್ ಲೈಸನ್ಸ್ ತಪ್ಪು ಎಂದು ಕಂಡುಬಂದಲ್ಲಿ ಈ ಕಛೇರಿಯಿಂದ ನೀಡಿರುವ ವಿದ್ಯುತ್ ಸಂಪರ್ಕವನ್ನು ರದ್ದುಗೊಳಿಸಲು ಮಾಹಿತಿ ನೀಡಬೇಕೆಂದು ಸೂಚಿಸಿರುತ್ತಾರೆ. ಎದುರುದಾರರು ತಮ್ಮ ಅಧಿಕಾರ ದುರ್ಬಳಕೆ ಮಾಡಿಕೊಂಡಿರುತ್ತಾರೆಂದು ಸರ್ಕಾರಕ್ಕೆ ಕಟ್ಟಬೇಕಿದ್ದ ತೆರಿಗೆಯನ್ನು ಎದುರುದಾರರು ಕಟ್ಟಿಸಿಕೊಳ್ಳದೆ ಕರ್ತವ್ಯ ಲೋಪ ಎಸಗಿರುತ್ತಾರೆಂದು ಆರೋಪಿಸಿರುತ್ತಾರೆ.

3. ಎದುರುದಾರರ ಆಕ್ಷೇಪಣೆಗಳು:-

ಶ್ರೀಮತಿ ಮಾದಮ್ಮ ಇವರಿಗೆ ವಸತಿ ಯೋಜನೆಯಲ್ಲಿ ನಿವೇಶನ ಸಂಖ್ಯೆ.45(ಅ.ನಂ.693/6) ಮಂಜೂರಾಗಿದ್ದು, ಮನೆಯನ್ನು ಕಟ್ಟಿಕೊಂಡು ವಾಸವಾಗಿರುತ್ತಾರೆ. ಶ್ರೀ.ಮರಯ್ಯ ಎಂಬುವರಿಗೆ 1975ರಲ್ಲಿ ನಿವೇಶನ ಮಂಜೂರಾಗಿದ್ದು, ಶ್ರೀಮತಿ ಮಾದಮ್ಮ, ಎಂಬುವವರಿಗೆ ಖಾತೆ ಬದಲಾವಣೆ ಆಗಿರುತ್ತದೆ. ಈ ನಿವೇಶನದಲ್ಲಿ ಮನೆ ಕಟ್ಟಲು 2012-13ನೇ ಸಾಲಿನಲ್ಲಿ ಇಂದಿರಾ

ಅವಾಜ್ ಯೋಜನೆಯಲ್ಲಿ ಮನೆ ಮಂಜೂರಾಗಿರುತ್ತದೆ. ಮನೆಯನ್ನು ಕಟ್ಟಲು ಅವರಿಗೆ ವಸತಿ ನಿಗಮದಿಂದ 21/02/2013 ರಲ್ಲಿ ಲೈಸೆನ್ಸ್ ನೀಡಿ ನಿಗಮದಿಂದ 75,000 ರೂಗಳು ಮಂಜೂರಾಗಿದ್ದು, ಮೊದಲು ಮನೆ ನಿರ್ಮಾಣ ಮಾಡಿ ನಂತರ ಮಳಿಗೆಗಾಗಿ ಬದಲಾವಣೆ ಮಾಡಿದ್ದರಿಂದ ಸದರಿಯವರಿಗೆ ಮಂಜೂರಾಗಿದ್ದ ಮನೆ ನಿರ್ಮಾಣದ ಹಣವನ್ನು ದಿನಾಂಕ 19.09.2016 ರಲ್ಲಿ ಸರ್ಕಾರಕ್ಕೆ ವಾಪಸ್ ಕಟ್ಟಿಸಿಕೊಳ್ಳಲಾಗಿದೆ.

01/08/2015 ರಿಂದ 31/07/2018 ರವರೆಗೆ ಸದರಿ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿಯಾಗಿ ಕಾರ್ಯ ನಿರ್ವಹಿಸಿರುವುದಾಗಿ ದಿನಾಂಕ 27/04/2017 ರಂದು ಶ್ರೀಮತಿ ಮಾದಮ್ಮ ಅಂಗಡಿಗೆ ಲೈಸೆನ್ಸ್, ಎನ್‌ಓಸಿ ಕೋರಿರುವ ಬಗ್ಗೆ ಸಭೆಯಲ್ಲಿ ಚರ್ಚಿಸಿ, ನಿವೇಶನದಲ್ಲಿ 693/6ರಲ್ಲಿ ನಿರ್ಮಿಸಿರುವ ಅಂಗಡಿ ಮಳಿಗೆಗೆ ಎನ್‌ಓಸಿ ಮತ್ತು ಜನರಲ್ ಲೈಸೆನ್ಸ್ ನೀಡಬಹುದೆಂದು ಸಭೆಯು ಸರ್ವಾನುಮತದಿಂದ ಒಪ್ಪಿಗೆ ನೀಡಿರುತ್ತದೆ ಎಂದು ನಮೂದಿಸಿರುತ್ತಾರೆ.

4.ತನಿಖಾ ಅವಧಿಯಲ್ಲಿ ಸಂಗ್ರಹಿಸಿದ ದಾಖಲೆಗಳನ್ನು ಪರಿಶೀಲಿಸಲಾಗಿ, ವಸತಿ ಯೋಜನೆಯಲ್ಲಿ ನಿವೇಶನ ಸಂಖ್ಯೆ: 45 (ಅ.ನಂ. 693/6) ಶ್ರೀ ಮರಯ್ಯ ಎನ್ನುವವರಿಗೆ 1975ರಲ್ಲಿ ಮಂಜೂರಾಗಿದ್ದು ಹೆಂಡತಿ ಮಾದಮ್ಮನವರ ಹೆಸರಿಗೆ ಖಾತೆ ಬದಲಾವಣೆಯಾಗಿರುತ್ತದೆ. 2012-13ನೇ ಸಾಲಿನಲ್ಲಿ ಇಂದಿರಾ ಆವಾಜ್ ಯೋಜನೆ ಅಡಿ ಮನೆ ಕಟ್ಟಲು ಲೈಸನ್ಸ್ ನೀಡಿ ನಿಗಮದಿಂದ ರೂ.75,000/- ಗಳು ಮಂಜೂರಾಗಿರುತ್ತದೆ. ಮಾದಮ್ಮನವರು ವಾಸಕ್ಕಾಗಿ ಕಟ್ಟಡ ನಿರ್ಮಾಣಕ್ಕೆ ಪರವಾನಿಗೆ ಪಡೆದು ಅಂಗಡಿ ಮಳಿಗೆಗಳಾಗಿ ಬದಲಾವಣೆ ಮಾಡಿದ್ದರಿಂದ ವಿಚಾರಣೆ ನಡೆಸಿ ಮನೆ ನಿರ್ಮಾಣ ಮಾಡಲು ಮಂಜೂರು ಮಾಡಿದ್ದ ಹಣವನ್ನು ಸರ್ಕಾರಕ್ಕೆ ಹಿಂತಿರುಗಿಸಿರುತ್ತಾರೆ. ಮಳಿಗೆಗಳಲ್ಲಿ ಅಂಗಡಿ ನಡೆಸಲು ಎನ್.ಓ.ಸಿ., ಮತ್ತು ಜನರಲ್ ಲೈಸನ್ಸ್ ನೀಡಲಾಗಿರುತ್ತದೆ. ವಾಸೋಪಯೋಗಿ ನಿವೇಶನದಲ್ಲಿ

ಅಂಗಡಿ ನಡೆಸಲು ಲೈಸನ್ಸ್ ನೀಡಿದ್ದಾಗಿ ದೂರು ಸಲ್ಲಿಸಿರುತ್ತಾರೆ. ಎದುರುದಾರರು ಗ್ರಾಮ ಪಂಚಾಯತಿಯಲ್ಲಿ 01/08/2015 ರಿಂದ 31/07/2018 ರವರೆಗೆ ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿ ಕಾರ್ಯ ನಿರ್ವಹಿಸಿರುತ್ತಾರೆ. ದಿನಾಂಕ: 27/04/2017 ರಂದು ನಡೆದ ಗ್ರಾಮ ಪಂಚಾಯತ್ ಸಾಮಾನ್ಯ ಸಭೆಯಲ್ಲಿ ಮಾದಮ್ಮನವರಿಗೆ ಅಂಗಡಿ ನಡೆಸಲು ಜನರಲ್ ಲೈಸನ್ಸ್ ಮತ್ತು ಎನ್.ಓ.ಸಿ., ಗಳನ್ನು ನೀಡಲು ತೀರ್ಮಾನಿಸಲಾಗಿರುತ್ತದೆ. ದಿನಾಂಕ: 28/04/2017 ರಂದು ಅಂಗಡಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲು ದೃಢೀಕರಣ ಪತ್ರ ನೀಡಿದ್ದು ದಿನಾಂಕ: 23/05/2017 ರಂದು ಅಂಗಡಿ ನಡೆಸಲು ಜನರಲ್ ಲೈಸನ್ಸ್ ನೀಡಲಾಗಿರುತ್ತದೆ. ಸದರಿ ದೃಢೀಕರಣ ಪತ್ರದಲ್ಲಿ ಹಾಗೂ ಜನರಲ್ ಲೈಸನ್ಸ್ ದಾಖಲೆಗಳಲ್ಲಿ ಎದುರುದಾರರ ಸಹಿಗಳಿರುತ್ತದೆ.

5.ಪಂಚಾಯತ್ ರಾಜ್ ಕಾಯ್ದೆ ಕಲಂ 64ರ ರೀತ್ಯಾ ಶ್ರೀಮತಿ ಮಾದಮ್ಮ ನವರಿಗೆ ವಾಸೋಪಯೋಗಿ ಕಟ್ಟಡ ಕಟ್ಟಲು ಪರವಾನಗಿ ನೀಡಿದ್ದು ಮನೆಯನ್ನು ನಿರ್ಮಿಸಿಕೊಂಡ ಕಟ್ಟಡದಲ್ಲಿ ಅಂಗಡಿ ಮಳಿಗೆಯನ್ನು ನಡೆಸಲು ಜನರಲ್ ಲೈಸನ್ಸ್ ಮತ್ತು ವಿದ್ಯುಚ್ಛಕ್ತಿ ಸಂಪರ್ಕ ಪಡೆಯಲು ಮಾದಮ್ಮ ರವರು ಗ್ರಾಂ ಪಂಚಾಯಿತಿಗೆ ಅರ್ಜಿಯನ್ನು ಸಲ್ಲಿಸಿದ್ದು, ಎದುರುದಾರನು ಅರ್ಜಿಯನ್ನು ಪರಿಶೀಲಿಸಿ ವಿದ್ಯುತ್ ಸಂಪರ್ಕ ಪಡೆಯಲು ದೃಢೀಕರಣ ಪತ್ರಗಳನ್ನು ನೀಡಿ ಪಂಚಾಯತ್ ರಾಜ್ ಕಾಯ್ದೆ ಕಲಂ 64(3)(4) ಮತ್ತು (5)ರ ರೀತ್ಯಾ ನಿಯಮ ಉಲ್ಲಂಘಿಸಿದ ಶ್ರೀಮತಿ ಮಾದಮ್ಮನವರ ವಿರುದ್ಧ ಎದುರುದಾರರು ಕ್ರಮ ಜರುಗಿಸದೆ ಪರವಾನಿಗೆ ನೀಡಿರುವುದು ಕರ್ತವ್ಯಲೋಪವಾಗಿರುತ್ತದೆ. ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆ ಕಲಂ 64(1)ರ ರೀತ್ಯಾ ನೀಡಿದ್ದ ಪರವಾನಗಿಯ ಷರತ್ತನ್ನು ಉಲ್ಲಂಘಿಸಿ ವಾಸೋಪಯೋಗಿ ಕಟ್ಟಡದಲ್ಲಿ ವಾಣಿಜ್ಯ ಅಂಗಡಿ ನಡೆಸಿದ್ದರೂ ಎದುರುದಾರರು ಕ್ರಮ ಜರುಗಿಸದೆ ಕರ್ತವ್ಯ ಲೋಪ ಎಸಗಿರುವುದು ಕಂಡುಬಂದಿರುತ್ತದೆ.

6.ಎದುರುದಾರರು ತನ್ನ ಆಕ್ಷೇಪಣೆಯಲ್ಲಿ ತಾನು ದಿ. 1.8.2015ರಿಂದ 31.7.2018ರವರೆಗೆ ಪಿಡಿಓ ಆಗಿ ಕೆಲಸ ನಿರ್ವಹಿಸಿರುವುದಾಗಿ ತಿಳಿಸಿದ್ದು ತನ್ನ ಅಧಿಕಾರಾವಧಿಯಲ್ಲಿ ಶ್ರೀಮತಿ ಮಾದಮ್ಮ ಕೋಂ ಗುಡ್ಡಯ್ಯ ಇವರ ಹೆಸರಿಗೆ ಖಾತಾ ಬದಲಾವಣೆ ಮಾಡಿರುವುದಾಗಲಿ, ಅಂಗಡಿ ಮಳಿಗೆಗಳನ್ನು ಕಟ್ಟಲು ಲೈಸೆನ್ಸ್ ನೀಡಿರುವುದಿಲ್ಲ ಎಂದು ಆಕ್ಷೇಪಣೆಯಲ್ಲಿ ತಿಳಿಸಿರುತ್ತಾರೆ. ಆದರೆ ದಾಖಲೆಗಳನ್ನು ಪರಿಶೀಲಿಸಿದಾಗ ಎದುರುದಾರರು ದಿ. 31.3.2018 ರಂದು ಮಾದಮ್ಮ ಇವರು ಅಂಗಡಿ ವ್ಯಾಪಾರ ನಡೆಸಲು ಜನರಲ್ ಲೈಸೆನ್ಸ್ ನೀಡಿರುವುದು ದಾಖಲೆಯಿಂದ ಕಂಡುಬರುತ್ತದೆ. ಸದರಿ ದಾಖಲೆಗೆ ಎದುರುದಾರರು ಸಹಿ ಮಾಡಿರುತ್ತಾರೆ. ಅದೇ ರೀತಿ ದಿನಾಂಕ 12.9.2017ರಂದು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಚಾ.ವಿ.ಸ.ನಿ.ನಿ. ಕಾರ್ಯ ಮತ್ತುಪಾಲನ ವಿಭಾಗ ಕೊಳ್ಳೇಗಾಲ ಇವರಿಗೆ ಬರೆದ ಪತ್ರದಲ್ಲಿ ಎದುರುದಾರರು ಜನರಲ್ ಲೈಸೆನ್ಸ್ ನೀಡಿರುವುದಾಗಿ ಸಮರ್ಥಿಸಿಕೊಂಡಿರುವುದು ಇರುತ್ತದೆ. ಹಾಗೆಯೇ ವಿದ್ಯುತ್ ಸಂಪರ್ಕ ಪಡೆಯಲು ಎದುರುದಾರರು ಎನ್.ಓ.ಸಿ.ಯನ್ನು ನೀಡಿದ್ದು ದಾಖಲೆಯಿಂದ ಕಂಡುಬರುತ್ತದೆ.

7.ದಿ. 27.4.2017ರಂದು ಜರುಗಿದ ಗ್ರಾಮ ಸಭೆಯಲ್ಲಿ ಎದುರುದಾರರು ವಾಸದ ಮನೆಯನ್ನು ಅಂಗಡಿ ಮಳಿಗೆಯಾಗಿ ರೆಕಾರ್ಡ ಮಾಡಲು ವಿಷಯವನ್ನು ಮಂಡನೆ ಮಾಡಿರುವುದು ಮತ್ತು ಅಂಗಡಿ ಮಳಿಗೆಗೆ ಎನ್.ಓ.ಸಿ. ನೀಡುವುದು ಮತ್ತು ಲೈಸೆನ್ಸ್ ನೀಡುವುದು ಈ ವಿಚಾರದ ಸಂಬಂಧ ಮಂಡನೆಯಾಗಿದ್ದು ಎದುರುದಾರರು ಸದರಿ ಸಭೆಯಲ್ಲಿ ಹಾಜರಿದ್ದು ಸಭೆಯಲ್ಲಿ ವಿಷಯ ಮಂಡನೆ ಮಾಡಿರುವುದು ಮತ್ತು ಸದರಿ ವಿಷಯವನ್ನು ಅಂಗೀಕರಿಸಿರುವುದು ದಾಖಲೆಯಿಂದ ಕಂಡುಬರುತ್ತದೆ. ಮೇಲ್ಕಾಣಿಸಿದ ಎಲ್ಲಾ ಅಂಶಗಳಿಂದ

ಎದುರುದಾರನು ತನ್ನ ಆಕ್ಷೇಪಣೆಯಲ್ಲಿ ಹೇಳಿರುವ ಅಂಶಗಳು ಹಾಜರು ಪಡಿಸಿರುವ ದಾಖಲೆಗಳಿಗೆ ವ್ಯತಿರಿಕ್ತವಾಗಿ ಕಂಡುಬರುತ್ತವೆ. ಆದ್ದರಿಂದ, ಎದುರುದಾರನ ಆಕ್ಷೇಪಣೆಯನ್ನು ಒಪ್ಪಲು ಸಾಧ್ಯವಿರುವುದಿಲ್ಲ.

8. ಆದ್ದರಿಂದ, ಎದುರುದಾರರು ತನ್ನ ಕರ್ತವ್ಯದಲ್ಲಿ ಲೋಪವೆಸಗಿ ವಾಸದ ಮನೆಯನ್ನು ವಾಣಿಜ್ಯ ಮಳಿಗೆಯಾಗಿ ಪರಿವರ್ತಿಸಲು ಮತ್ತು ವಾಸದ ಮನೆಗೆ ವಿದ್ಯುತ್ ಸರಬರಾಜು ನೀಡುವಂತೆ ಇದ್ದ ಅಂಶವನ್ನು ತಿರುಚಿ ಅಂಗಡಿ ಮಳಿಗೆಗೆ ವಿದ್ಯುತ್ ಸರಬರಾಜು ಮಾಡುವಂತೆ ವಿದ್ಯುತ್ ಕಂಪನಿಗೆ ಪತ್ರ ನೀಡಿದ್ದು ಇದರಿಂದ ಸರ್ಕಾರಕ್ಕೆ ಬರಬೇಕಾಗಿದ್ದ ಶುಲ್ಕವನ್ನು ಖಾಸಗಿ ವ್ಯಕ್ತಿಗಳು ಪಾವತಿಸದೆ ವಾಸದ ಮನೆಯನ್ನು ವಾಣಿಜ್ಯ ಮಳಿಗೆಯಾಗಿ ಪರಿವರ್ತನೆ ಮಾಡಿಕೊಂಡಿದ್ದು ಆದ್ದರಿಂದ ಎದುರುದಾರರು ತನ್ನ ಕರ್ತವ್ಯದಲ್ಲಿ ಲೋಪವೆಸಗಿದ್ದು ಅಲ್ಲದೆ ಸರ್ಕಾರಕ್ಕೆ ನಷ್ಟ ಉಂಟುಮಾಡಿರುವುದು ಸಾಬೀತಾಗುತ್ತದೆ.

9. ಎದುರುದಾರರು ದಿ. 12.5.2019ರಂದು ಹುದ್ದೆಯಿಂದ ನಿವೃತ್ತಿಯಾಗಿದ್ದು, ಎದುರುದಾರರ ಸೇವಾ ವಿವರದಿಂದ ಕಂಡುಬರುತ್ತದೆ. ಆದ್ದರಿಂದ, ಎದುರುದಾರರ ವಿರುದ್ಧ ಕೆ.ಸಿ.ಎಸ್.ಆರ್.ನಿಯಮ 214 (2)(ಬಿ)ರಡಿ ಕ್ರಮ ಕೈಗೊಳ್ಳಬಹುದಾಗಿರುತ್ತದೆ.

10. ಮೇಲೆ ಚರ್ಚಿಸಲಾದ ಕಾರಣಗಳ ಹಿನ್ನಲೆಯಲ್ಲಿ ಕರ್ನಾಟಕ ನಾಗರೀಕ ಸೇವೆ (ನಡತೆ) ನಿಯಮ 1966ರ ನಿಯಮಗಳು 3(1) (i) ರಿಂದ (iii) ರನ್ವಯ ಎದುರುದಾರರಾದ ಶ್ರೀ ಮರಿಸ್ವಾಮಿ, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ಪಾಳ್ಯ ಗ್ರಾಮ ಪಂಚಾಯತ್, ಕೊಳ್ಳೇಗಾಲ ತಾಲ್ಲೂಕು, ಚಾಮರಾಜನಗರ ಜಿಲ್ಲೆ

ರವರ ವಿರುದ್ಧ ಶಿಸ್ತು ಕ್ರಮ ಜರುಗಿಸಲು ಹಾಗೆಯೇ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957ರ ಸನಿಯಮ 14-ಎ ರ ಅಡಿಯಲ್ಲಿ ಇಲಾಖಾ ವಿಚಾರಣೆ ನಡೆಸಲು "ಉಪಲೋಕಾಯುಕ್ತರಿಗೆ" ಒಪ್ಪಿಸುವಂತೆ ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(3) ರನ್ವಯ ಪ್ರದತ್ತವಾದ ಅಧಿಕಾರದಡಿ, ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

11. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(4) ರ ಪ್ರಕಾರ, ಶಿಸ್ತು ಪ್ರಾಧಿಕಾರವು ಈ ವರದಿಯನುಸಾರ ಕೈಗೊಂಡ ಕ್ರಮದ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ, ಈ ವರದಿ ತಲುಪಿದ ದಿನಾಂಕದಿಂದ **ಮೂರು ತಿಂಗಳೊಳಗಾಗಿ** ಈ ಪ್ರಾಧಿಕಾರಕ್ಕೆ ವರದಿ ಮಾಡಲು ಕೋರಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿದೆ.

Sd/- 21/12

**[ನ್ಯಾಯಮೂರ್ತಿ ಬಿ.ಎಸ್. ಪಾಟೀಲ್]**
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ, ಬೆಂಗಳೂರು.**